Regd No. M. 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 132] ಶುಕ್ರವಾರ 24—1—47 [ಬಿಡಿ ಪ್ರತಿ 3 ಪೈ

ಖಿಲಾಫತ್ - ಪಾಕಿಸ್ತಾನ್

ಸ್ಕೀಂ

❋

[ಮುಂದುವರಿದುದು]

ಜನ್ಮ ಹಕ್ಕು

ಶಾಂತಿಗಾಗಿ, ಔದಾರ್ಯಕ್ಕಾಗಿ 25 ವರ್ಷಗಳು ತಾಪತ್ರಯ ಪಟ್ಟಿರುವು' ನನ್ನ ತಾಪತ್ರಯವನ್ನು ನೋಡುತಿ ರುವಂತೆಲ್ಲಾ ಅವರ ದೌಷ್ಟ್ಯವು ಹೆಚ್ಚುತ್ತಿದೆ. ಆದುದರಿಂದ ಹಿಂದೂಗಳು ತಮ್ಮ ಶಾಂತಿ, ತಮ್ಮ ರಕ್ಷಣೆಗಾಗಿ ಬೇರೇ ಮಾರ್ಗಗಳನ್ನು ಅವಲಂಬಿಸ ಬೇಕು. ಆತ್ಮರಕ್ಷಣೆಯನ್ನು ಮಾಡಿ ಕೊಳ್ಳುವಿಕೆಯು ಇತರರನ್ನ ಅಣಗಿಸು ವುದೆನ್ನಿಸಿಕೊಳ್ಳುವುದಿಲ್ಲ ; ಪರಮತ ದ್ವೇಷವು ಎಷ್ಟು ಮಾತ್ರವೂ ಅಲ್ಲ' ಅದು ಪ್ರತಿ ವ್ಯಕ್ತಿಯ ಜನ್ಮಹಕ್ಕು.

ಈ ಜನ್ಮ ಹಕ್ಕನ್ನು ರಕ್ಷಿಸಿಕೊಳ್ಳಲು ಇಷ್ಟು ಕಾಲದ ವರೆಗೂ ಹಿಂದೂಗಳು ನಿರಾಕರಿಸಿದರು. ಇದೇ ಅವರು ತನ್ನು ಮತಕ್ಕೂ ಸರಘಕ್ಕೂ ಶಾಂತಿಗೂ ಮಾಡಿದ ಘೋರವಾದ ತಪ್ಪು. ಅಂಥಾ ತಪ್ಪನ್ನು ಅವರು ಮತ್ತೊಂದು ಸಾರಿ ಮಾಡಕೂಡದು. ಅವರು ಆತ್ಮರಕ್ಷಣೆಯನ್ನು ನಿರಾಕರಿಸಿದಲ್ಲಿ ಯಾರೂ ಅವರಿಗೆ ಸಹಾಯಕರಾಗಲಾರರು.

ಗಾಂಧಿ ಸಿದ್ಧಾಂತ ಕಾಲುಸ್ಯವು

ಲೀಗು ಗೂಂಡಾಗಳು ಸಾವಿರಗಟ್ಟಲೆ ಹಿಂದೂಗಳನ್ನು ಕೊಂದುಹಾಕುತ್ತಿದ್ದರೂ, ಸಾಯುತ್ತಿರುವಂಥವರಾಗಲಿ ಇತರ ಹಿಂದವಗಳಾಗಲಿ ಮಾತನಾಡದೆ ಸಂತೋಷವಾಗಿ ಸಾಯಲು ಸಿದ್ಧರಾಗಿರಬೇಕೆಂಬ ನಿರ್ಜೀತ ಪ್ರಣಾಳಿಕೆಯ ಪ್ರಕಾರ ಸಾಧ್ಯವಾದಾಗಲೆಲ್ಲಾ ಇಂಥಾ ಪದ್ಧತಿಯನ್ನೇ ಕೆಲಸವಾಗಿಟ್ಟುಕೊಂಡ ಮತಾವೇಶ ಪೀಡಿತರ ಮುಂದೆ ಈ ಬಗೆಯ ಪವಿತ್ರ ಭಾವಗಳನ್ನು ತಮ್ಮವರಿಗೆ ಬೋಧಿಸುತ್ತಾ ಕೂತಿರುವುದಕ್ಕಿಂತ ಸಶ್ವನಾಶಕ್ಕೆ ಬೇರೆ ಸಾಧನೆಯ ಅವಶ್ಯಕತೆ ಇರುವುದಿಲ್ಲ. ಕಳೆದ 65 ವರ್ಷಗಳ ಚರಿತ್ರೆಯನ್ನು ಮೆಲಕು ಹಾಕುತ್ತಾ ನೋಡಿದಲ್ಲಿ ಇಂಥಾ ಸೂತ್ರವು ಎಷ್ಟು ನಿರೇಕವಾದ ತಪ್ಪಿತವೋ ಬೋಧೆ ಆಗುವುದಲ್ಲದು. (ತ್ರಿ)

[ನಾಳೆ ಸಂಚಿಕೆ ನೋಡಿ

ವರ್ತಮಾನ ಸಂಗ್ರಹ

ಬೆಂಗಳೂರು ಜ 23 — ರಾಜಧ್ರೋಹ ಹಾಪಾಡನೆಗೆ ಗುರಿಯಾದ ಕಾಂಗ್ರೆಸ್ ಮುಖಂಡರಾದ ಶ್ರೀ ಹನುಮಂತಯ್ಯನವರಿಗೆ ಅ || ಜಿ || ಮ್ಯಾಜಿಸ್ಟ್ರೇಟರು 15 ತಿಂಗಳ ಕಠಿಣ ಸಜೆಯನ್ನೂ 500 ರೂ ಜುಲ್ಮಾನೆಯನ್ನೂ ವಿಧಿಸಿದರು

ಕಲ್ಕತ್ತಾ ಜ 22 — ಕಲ್ಕತ್ತಾದಲ್ಲಿ ಪೋಲೀಸರು ಗುಂಡುಹಾರಿಸಿದ್ದನ್ನು ಪ್ರತಿಭಟಿಸಿ, ವಿದ್ಯಾರ್ಥಿಗಳು ರಸ್ತೆಯ ಸಂಚಾರಕ್ಕೆ ಅಡ್ಡಿಪಡಿಸಿ ವಾಹನಗಳ ಮುಂದೆ ಪಿಕೆಟಿಂಗು ನಡೆಸಿ ಸಾರ್ವಜನಿಕ ಹರತಾಳ ನಡೆಸಲು ಒಲವಂತವಡಿಸಿದರು.

ನವದೆಹಲಿ ಜ 22 — ಶುಕ್ರವಾರ ರಾಜ್ಯಾಂಗ ಸಭೆಯು ಮುಂದೆ ಭಾನುವಾರ ವ್ಯಾಂತ್ಯ ರಚನೆ ನಿರ್ಣಯವು ಬರುವುದು. ನಿರ್ಣಯ ರಚನೆಗೆ ಪಂ || ನೆಹರೂರವರ ಸಹಾಯ ದೊರೆಯಿಶು.

ಬೆಂಗಳೂರು ಜ 23— ಚನ್ನಪಟ್ಟಣದ ಗಲಭೆ ಸಂಬಂಧದ ಅಪಾದಿತರಲ್ಲಿ 11 ಮಂದಿಯನ್ನು ಜಾಮೀನಿನ ಮೇಲೆ ಬಿಡಲು ಅ || ಸೆ || ಜಡ್ಜರ ಆಜ್ಞೆ ಮಾಡಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ

ಇದೇ ತಿಂಗಳು 26 ನೇ ತಾ || ಭಾನುವಾರ ಬೆಳಿಗ್ಗೆ 9 ಗಂಟೆಗೆ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಒಂಟಿಕೊಪ್ಪಲಿನಲ್ಲಿರುವ ತಿಲಕ್ ಸಂಘದ ಕಟ್ಟಡದಲ್ಲಿ ' ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಗುವುದು. ವಿದ್ಯಾರ್ಥಿ ಕಾಂಗ್ರೆಸ್ಸಿನ ಸದಸ್ಯರುಗಳೆಲ್ಲರೂ ಸಕಾಲಕ್ಕೆ ದಯಮಾಡಿಸಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಬೇಕಾಗಿ ಕಾರ್ಯದರ್ಶಿಗಳವರು ಪ್ರಾರ್ಥಿಸುತ್ತಾರೆ.

ಜುಲ್ಮಾನೆಗಳು

ಮದರಾಸು ಜ 22 — ರಸ್ತೆಯಲ್ಲಿ ಮುಷ್ಕರ ಘೋಷಣೆ ಬರೆಯುತ್ತಿದ್ದ ಇಬ್ಬರು ಹುಡುಗರಿಗೆ ತಲಾ 5 ರೂ ಜುಲ್ಮಾನೆ ವಿಧಿಸಲಾಗಿದೆ.

ಮದರಾಸು ಜ 21 — ವ್ಯಭಿಚಾರ ಗೃಹ ನಡೆಸುತ್ತಿದ್ದ ಅಪಾದನೆ ಮೇಲೆ ಮಿ|| ಮಿಚಲ್ ಎಂಬುವಳಿಗೆ ರೂ. 500 ಜುಲ್ಮಾನೆ ವಿಧಿಸಲಾಗಿದೆ.



LAYING A PRE-FABRAILWAY

ರಾಮೇಶ್ವರ ದೇವಸ್ಥಾನಕ್ಕೆ ಹರಿಜನರ ಪ್ರವೇಶವೇ

ರಾಮೇಶ್ವರಂಕ್ಕೆ ಕಳೆದ ಮಂಗಳವಾರ ಮದರಾಸು ವ್ಯವಸಾಯ ಮಂತ್ರಿ ಶ್ರೀ ಕುಮಾರಸ್ವಾಮಿರಾಜರು ಬಂದಾಗ ದೇವಸ್ಥಾನದ ಧರ್ಮದರ್ಶಿಗಳು ಅವರನ್ನು ಸ್ವಾಗತಿಸಿದರು. ಪೂಜಾಜನರ ಇಚ್ಛೆಯನ್ನೂ ಸರಕಾರದ ನೀತಿಯನ್ನೂ ಅನುಸರಿಸಿ ಈ ದೇವಸ್ಥಾನವನ್ನು ಹರಿಜನರ ಪ್ರವೇಶಕ್ಕೆ ಅವಕಾಶ ಕೊಡಬೇಕೆಂದರು.

ಮೈಸೂರಿಗೆ ಮದ್ರಾಸ್ ಗೌರ್ನರು

ಮೈಸೂರು ಜ 23 — ಮದರಾಸು ಗೌರ್ನರವರು ತಮ್ಮ ಪತ್ನಿಯರೊಡನೆ ನಿನ್ನೆಯ ದಿವಸ ಇಲ್ಲಿಗೆ ದಯಮಾಡಿಸಿದರು. ನಮ್ಮ ಮಹಾರಾಜಾವರ ವಿಮಾನದಲ್ಲಿ. ಅವರು ಭಾನುವಾರ ಸಂಜೆ ಇಲ್ಲಿಂದ ಮದರಾಸಿಗೆ ತೆರಳುವರು.

ಮದರಾಸಿನಲ್ಲಿ ಲಾಠಿ ಛಾರ್ಜು

ಮದರಾಸು ಜ 23 — ಟ್ರಿಪ್ಲಿಕೇನಿನಲ್ಲಿ ಪೋಲೀಸು ಕಮಿಷನರ ಆಜ್ಞೆ ನಿರೋಧಿಸಿ ಪೆರವಣಿಗೆ ಹೊಂಟ ಪ್ರೆಸಿಡೆನ್ಸಿ ಕಾಲೇಜು ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜು ಮಾಡಲಾಯಿತು.

ಮುಸ್ಲಿಂ ಸ್ತ್ರೀಗೆ ನಿಧಿ

ಸೇಲಂ — ಕಳೆದ ಅಕ್ಟೋಬರಿನಲ್ಲಿ ನಡೆದ ಗಾಂಧಿ ಜಯಂತಿ ಸಂಬಂಧದಲ್ಲಿ ಪೋಲೀಸರು ಗುಂಡುಹಾರಿಸಿದಾಗ ಮಡಿದ ದಸ್ತಗೀರ್ ಸಾಹೇಬರ ಪತ್ನಿಗೆ ಕಳೆದ ಶುಕ್ರವಾರ ನಡೆದ ವಿಾಟಂಗಿನಲ್ಲಿ ರೂ 647-13-0 ನಿಧಿ ಅರ್ಪಿಸಲಾಯಿತು.

ಬೆಂಗಳೂರು ಜ 23— ಕಲ್ಕತ್ತಾದಲ್ಲಿ ವಿದ್ಯಾರ್ಥಿಗಳ ಮೇಲೆ ನಡೆದ ಗೋಲೀಬಾರು ಪ್ರಕರಣವನ್ನು ಖಂಡಿಸುವುದಕ್ಕಾಗಿ ಇಲ್ಲಿಯ ವಿದ್ಯಾರ್ಥಿಗಳು ಹರತಾಳವನ್ನಾಚರಿಸಿದರು.

ವೆಲ್ಲೂರು — ಇಲ್ಲಿಯ ಮಾರ್ಕೆಟ್‌ನಲ್ಲಿಯ ಅಂಗಡಿಗಳ ಬಾಡಿಗೆ ಹೆಚ್ಚಿಸಲು ಮುನಿಸಿಪಾಲಿಟಿಯವರು ನಿರ್ಧರಿಸಿರುವರು.

ಕೈರೋ ಜ 21 — ಬ್ರಿಟಿಷ್ ಸಾರಥರನು ಖೂನಿ ಮಾಡಲ್ಪಟ್ಟಿದ್ದನು ಪೋಲೀಸು ನಾಯಿಯ ಸಾಹಸದಿಂದ ಕೊಲೆ ಪಾತಕರು ಸಿಕ್ಕಿ ಬಿದ್ದರು.

ಹೇಕಮಿಷನ್ನಿನವರು ಗಮನಿಸುವರೇ ?

ಪ್ರೈಮರೀ ಶಾಲಾ ಮಧ್ಯಮ ಸಂಬಳಗಾರರ ಉತ್ಸಾಹಭಂಗ

ನಮ್ಮ ಘನ ಸರಕಾರದವರು 1941 ರಲ್ಲಿ ಉಪಾಧ್ಯಾಯರ ತಲಬನ್ನು ರಿವೈಸ್ ಮಾಡಿದಾಗ್ಗೆ ಹೈಮತ್ತು ಮಿಡಲ್ ಸ್ಕೂಲು ಉಪಾಧ್ಯಾಯರಲ್ಲಿ ಮಾತ್ರ 'ಗ್ರಾಜುಯೇಟ್ ಮತ್ತು ಅಲಡರ್ ಗ್ರಾಜುಯೇಟ್' ಎಂಬಡಾಗಿ ವಿಂಗಡಿಸಿ ತಲಬನ್ನು ದಯಪಾಲಿಸಿರುವಂತೆ ಈ ಪ್ರೈಮರೀ ಸ್ಕೂಲು ಉಪಾಧ್ಯಾಯರಲ್ಲಿಯೂ 'ಟ್ರೇನ್ಡ್ ಮತ್ತು ಅಟ್ರೇನ್ಡ್' ಎಂಬದಾಗಿ ವಿಂಗಡಿಸಿ ತಲಬನ್ನು ಗೊತ್ತುಮಾಡದೆ ಕೇವಲ ಪೇ ಸೀನಿಯಾರಿಟಿಯನ್ನು ಮುಖ್ಯವಾಗೆಣಿಸಿ ಕೊಟ್ಟಿರುವುದರಿಂದ ಸರ್ವಿಸ್‌ದಾರರಾದ ಅನೇಕ ವಿದ್ಯಾವಂತರಿಗೆ ಸೀನಿಯಾರಿಟಿಯೂ ತಪ್ಪುವಂತಾಗಿ ಏನೊಂದೂ ಪ್ರಯೋಜನವಾಗಿಲ್ಲ. ಆಗ್ಗೆ ಹಿಂದೆ ಕೊಟ್ಟಿದ್ದ ಗ್ರೇಡ್ ಭರ್ತಿಯಾಗದೆ ಇದ್ದ 20–1–25 ಮತ್ತು 25–1–30 ರಗ್ರೇಡುಗಳಲ್ಲಿದ್ದವರಿಗೆ ಭರ್ತಿ ಮಾಡಿ ಮುಂದಿನ ಗ್ರೇಡನ್ನೂ ಕೊಟ್ಟುದರಿಂದ ಅಂಥವರಿಗೆ ತಕ್ಕ ಮಟ್ಟಿಗೆ ಪ್ರಯೋಜನವಾಯಿತೇ ಪರಂತುಗ್ರೇಡು ಭರ್ತಿಯಾಗಿ ಅನೇಕವರ್ಷಗಳಿಂದ ಕೂಳಿತು ಕಾದು ಕುಳಿತಿದ್ದವರಿಗೆ ಏನೂ ಫಲ ದೊರೆಯಲಿಲ್ಲ. ಇದಕ್ಕಾಗಿ ಹೆಚ್ಚು ಕಾಲ ಒಂದೇ ತಲಬನಲ್ಲಿದ್ದವರಿಗೆ ಅವಂವರ ಸರ್ವಿಸ್ ಮೇರೆ ಸಿಂಗಲ್ ಮತ್ತು ಡಬ್ಬಲ್ ಇಂಕ್ರಿಮೆಂಟನ್ನು ಕೊಡಲಾಗುವುದೆಂದು ಕಣ್ಣೊರೆಸಿ ಹೈ ಮತ್ತು ಮಿಡ್ಲ್ ಸ್ಕೂಲಿನವರಿಗೆ ಮಾತ್ರ ಕೊಟ್ಟು ಪ್ರೈಮರಿ ಸ್ಕೂಲಿನವರಿಗೆ ಕೊಡಲೇ ಇಲ್ಲ.

ಇತ್ತೀಚೆಗೆ 15 ರೂ. ನವರಿಗೆಲ್ಲಾ 20 ರೂ. ಪೂರ್ತ ಕೊಡಲಾಯಿತು. ಆ ಸಂದರ್ಭದಲ್ಲಿಯೂ ಸರ್ವಿಸ್‌ದಾರರಾದ ಮಧ್ಯವರ್ತಿ ಸಂಬಳದವರ ನೆನಪು ಬರಲಿಲ್ಲ

ಈ ಮಧ್ಯವರ್ತಿ (ಈಗಿನ 20-1-25 ಮತ್ತು 25-1-30) ಉಪಾಧ್ಯಾಯರಲ್ಲಿ ಪಂಡಿತ್ ಪಂಡಿತ್‌ಕೋತ್ತಿ ws wst vtc ಮುಂತಾದ ಹೆಚ್ಚು ವಿದ್ಯಾಯೋಗ್ಯತೆಯುಳ್ಳವರಿರುತ್ತಾರೆ. ಇವರಿಗೆ ಯಾವ ವಿಧದಲ್ಲಿಯೂ ಪ್ರೋತ್ಸಾಹವಿಲ್ಲದೆ ಕೆಲಸದಲ್ಲಿ ತುಂಬಾ ನಿರುತ್ಸಾಹಿಗಳಾಗಿರುತ್ತಾರೆ ಪ್ರೈಮರಿ ಸ್ಕೂಲ್ ಉಪಾಧ್ಯಯರು ಸಮುದ್ರ ವಿ ಕೆ ? ಸಾಗರವಾಗಬಹುದು. ಆದರೆ ? ಉದರಭರಣವು ಅಲ್ಪವೆ ? ಇದು ಉಪಾಧ್ಯಾಯರ ದುರವ್ಯಸ್ಥ.

ಆದ್ದರಿಂದ ಪ್ರೈಮರಿ ಸ್ಕೂಲಿನಲ್ಲಿರುವ ಸರ್ವಿಸ್ ಮತ್ತು ಹೆಚ್ಚು ವಿದ್ಯಾಯೋಗ್ಯತೆಯುಳ್ಳ ವೇಲೆಕಂಡ ಮಧ್ಯವರ್ತಿ ಉಪಾಧ್ಯಾಯರ ವಿಷಯದಲ್ಲಿ ವು ಸರ್ವಿಮರ್ಶೆ ಮಾಡಿ ಹೆಚ್ಚು ಪ್ರೋತಾಹ ದೊರೆಯುವಂತೆಯೂ ಹೈ ಮಿಡ್ಲ್ ಉಪಾಧ್ಯಾಯರುಗಳಿಗೆ ಕೊಟ್ಟಿರುವಂತೆ ಸಿಂಗಲ್ ಮತ್ತು ಡಬ್ಬಲ್ ಇನ್‌ಕ್ರಿಮೆಂಟನ್ನು ಸರ್ವಿಸ್‌ದಾರರಿಗೆ ದಯಪಾಲಿಸುವಂತೆ ಏರ್ಪಡಿಸುವುದಾಗಿ ನಂಬೋಣವೇ ?

ನೊಂದವ

ಚಳಿಜ್ವರಕ್ಕೆ

ಉಚಿತವಾಗಿ ಔಷಧವನ್ನು ಕೊಡಲಾಗುವುದು.

ಅಶೋಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಶಕ್ತಿ ಸುಧಾ ಸೇವಿಸಿ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ನಿಸ್ಸಾರವಾದ, ನಶಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿ ಸುಧಾ, 1067 ಚಾಮರಾಜಪುರಂ, ಮೈಸೂರು



At Ranjit_____ 2nd Glorious Week

BANSARI

ಚಾರ್ಲಿ, ಈಶ್ವರ್‌ಲಾಲ್, ಪದ್ಮಿನಿ, ದೀಕ್ಷಿತ್, ಕೇಸರಿ ಪಾತ್ರವಹಿಸಿರುವ

ಬನ್ನರಿ (ಹಿಂದಿ)

At Opera ☰ From 24–I–47

JUNGLE GODESS

— Starring —

Noah Berry — Dorothy Short — Fredric Mackaya

Daily 3 Shows

Edited, Printed and Published by M. S Krishna Rao at the Satyavadi Press ChamarajAgrahar, Mysore.

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ